383 (849) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಪ್ರವಾಸೋದ್ಯಮ ಮತ್ತು ಮೂ,ಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ಸಿ ಎನ್ ದುರ್ಗ ಹೋಬಳಿಯ 'ಸಿದ್ದರ ಬೆಟ್ಟದಲ್ಲಿ' ಔಷಧಿ ಗಿಡಮೂಲಿಕೆಗಳು ಮತ್ತು ಪ್ರಾಚೀನಗುಹೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಸಿದ್ದರಬೆಟ್ಟ ಮಣ್ಯ ಕ್ಷೇತ್ರವಾಗಿದ್ದು, ಹೆಚ್ಚು ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುತ್ತಿರುವುದು ನಿಜವಲ್ಲವೇ,

ಇ) ಹಾಗಿದ್ದಲ್ಲಿ ಬರುವ ಪ್ರವಾಸಿಗರ ಅನುಕೂಲಕ್ಕಾಗಿ ರಸ್ತೆ ಪ್ರವಾಸಿಗರ ಅನುಕೂಲಕ್ಕಾಗಿ ರಸ್ತೆ, ಪ್ರವಾಸಿ ಮಂದಿರ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ, ಹಾಗಿದ್ದಲ್ಲಿ ಈ ಸೌಲಭ್ಯಗಳನ್ನು ಯಾವಾಗ ಮೂರೈಸಲಾಗುವುದು?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಹೌದು,

ಆ) ಹೌದು,

ಇ) ಪ್ರವಾಸೋದ್ಯಮ ಇಲಾಖೆಯು ಸಿದ್ದರಬೆಟ್ಟದಲ್ಲಿ ರೂ 65 00 ಲಕ್ಷಗಳ ವೆಚ್ಚದಲ್ಲಿ ಬೆಟ್ಟಕ್ಕೆ ಮೆಟ್ಟಿಲು ಸೌಲಭ್ಯ ಹಾಗೂ ಡಾರ್ಮೆಟರಿ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ ಈ ಬಗ್ಗೆ ಈಗಾಗಲೇ ಅಂದಾಜು ಪಟ್ಟಿಯನ್ನು ತಾಂತ್ರಿಕ ಪರಿಶೀಲನೆಗಾಗಿ ಲೋಕೋಪಯೋಗಿ ಇಲಾಖೆಗೆ ನಲ್ಲಿಸಲಾಗಿದೆ

384 (667) ಡಾ ಮಹಾದೇವಪ್ಪ ಹೆಚ್ ಸಿ (ಟಿ ನರಸೀಪುರ) ವಿಧಾನ ಸಭಾ ಸದಸ್ಯರು ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ಕಂಬಾಲದಲ್ಲಿ ಕಂಬಾಲಪಲ್ಲಿ ಗ್ರಾಮದಲ್ಲಿ ನಡೆದ ದಲಿತರ ನರಮೇಧ ಪ್ರಕರಣದ ಸಂಬಂಧ ನ್ಯಾಯಾಲಯವು ನೀಡಲಾಗಿರುವ ತೀರ್ಪಿನಿಂದ ಆಪಾದಿತರೆಲ್ಲರೂ ನಿರ್ದೋಷಿಗಳಾಗಿರುವುದು ನಿಜವಲ್ಲವೇ,

ಆ) ಸಾಕ್ಷಾಧ್ಯಾರಗಳನ್ನು ನೀಡುವಲ್ಲಿ ಸರ್ಕಾರ ವಿಫಲವಾಗಿರುವುದು ನಿಜವಲ್ಲದೆ,